ವಿದ್ಯಾರ್ಥಿನಿಲಯಗಳಲ್ಲಿರುವ ವಿದ್ಯಾರ್ಥಿಗಳಿಗೆ ಹಾಸಿಗೆ ಮತ್ತು ಹೊದಿಕೆ ಒದಗಿಸುವ ಬಗ್ಗೆ

೧೨೮. ಶ್ರೀ ಜಿ ರಾಜುಗೌಡ (ಹನೂರು).--ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ಎರಡು ವರ್ಷಗಳಲ್ಲಿ ರಾಜ್ಯದಲ್ಲಿರುವ ಎಲ್ಲಾ ರೀತಿಯ ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಹಾಸಿಗೆ ಹೊದಿಕೆಗಾಗಿ ಸರ್ಕಾರದವರು ಎಷ್ಟು ಹಣ ಮೆಚ್ಚ ಮಾಡಿದ್ದಾರೆ ?

ಆ) ಅದರ ಹಿಂದಿನ ಎರಡು ವರ್ಷಗಳಲ್ಲಿ ಈ ಬಾಬಿಗಾಗಿ ಎಷ್ಟು ಮೆಚ್ಚ ಮಾಡಲಾಗಿದ್ದೀತು ?

ಶ್ರೀ ಜಿ. ಬಸವಣ್ಣೆಪ್ಪ (ಸಮಾಜ ಕಲ್ಯಾಣ ಸಚಿವರು).--

ಅ) ೧೯೮೪-೮೫ ... ರೂ. ೨೬,೨೧,೦೦೦-೦೦

೧೯೮೫-೮೬ ... ಆಯವ್ಯಯದಲ್ಲಿ ಸಾಕಷ್ಟು ಹಣ ಒದಗಿಸಿಲ್ಲದ ಕಾರಣ ಹಾಸಿಗೆ ಮತ್ತು ಹೊದಿಕೆಗಳನ್ನು ಪೂರೈಸಲಾಗಲಿಲ್ಲ.

ಆ) ೧೯೮೩-೮೪ ... ರೂ. ೬,೬೨,೫೦೦-೦೦

೧೯೮೨-೮೩ ... ರೂ. ೧೬,೦೪,೫೦೦-೦೦

ಶ್ರೀ ಜಿ. ರಾಜುಗೌಡ.--ವಿದ್ಯಾರ್ಥಿನಿಲಯಗಳಲ್ಲಿರುವ ವಿದ್ಯಾರ್ಥಿಗಳಿಗೆ ಪ್ರತಿ ವರ್ಷ ಹಾಸಿಗೆ ಮತ್ತು ಹೊದಿಕೆಗಳನ್ನು ಕೊಡುವಂತಹ ಪರಿಪಾಠ ಸರ್ಕಾರಕ್ಕೆ ಇದೆಯೇ ? ೧೯೮೪-೮೫ರಲ್ಲಿ ಕೊಟ್ಟಿದ್ದೇವೆಂದು ಹೇಳಿದ್ದೀರಿ. ೧೯೮೨-೮೩ರಲ್ಲಿ ಕೊಟ್ಟಿದ್ದೀರಿ. ೧೯೮೫-೮೬ರಲ್ಲಿ ಏತಕ್ಕೆ ಇದಕ್ಕೆ ಹಣವನ್ನು ಒದಗಿಸಲಾಗಲಿಲ್ಲ ? ಖರ್ಚು ಮಾಡಲಿಕ್ಕೆ ಹಣ ಇಲ್ಲವೆ ? ಏತಕ್ಕೆ ಹಣವನ್ನು ಒದಗಿಸಲಿಲ್ಲ ? ಪ್ರತಿ ವರ್ಷ ಹಾಸಿಗೆ ಮತ್ತು ಹೊದಿಕೆಗಳಿಗಾಗಿ ಹಣವನ್ನು ಒದಗಿಸಲಾಗುತ್ತದೆಯೆ ?

ಶ್ರೀ ಜಿ. ಬಸವಣ್ಣೆಪ್ಪ --ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಗೆ ವರ್ಷಕ್ಕೊಮ್ಮೆ ಹಾಸಿಗೆ ಮತ್ತು ಹೊದಿಕೆಗಳನ್ನು ಕೊಡುವ ವ್ಯವಸ್ಥೆಯಿಲ್ಲ. ವಿದ್ಯಾರ್ಥಿನಿಲಯಗಳಲ್ಲಿರತಕ್ಕ ಒಬ್ಬ ವಿದ್ಯಾರ್ಥಿಗೆ ೧೦೦ ರೂಪಾಯಿಗಳನ್ನು ಹಾಸಿಗೆ ಮತ್ತು ಹೊದಿಕೆಯನ್ನು ಮೂರು ವರ್ಷಕ್ಕೊಮ್ಮೆ ಕೊಡಲಾಗುತ್ತದೆ. ೧೯೮೫-೮೬ರಲ್ಲಿ ಹಾಸಿಗೆ ಮತ್ತು ಹೊದಿಕೆಗಳಿಗೆ ಹಣವನ್ನು ಒದಗಿಸಲಾಗಿಲ್ಲ. ಮೂರು ವರ್ಷಗಳಿಗೊಮ್ಮೆ ಕೊಡುತ್ತೇವೆ.

ಶ್ರೀ ಜಿ.ರಾಜುಗೌಡ.-- ೧೯೮೫-೮೬ರಲ್ಲಿ ಹೊಸದಾಗಿ ಸೇರಿರತಕ್ಕ ವಿದ್ಯಾರ್ಥಿಗಳಿಗೆ ಒದಗಿಸಬೇಕಾದ ಅವಶ್ಯಕತೆ ಇದೆಯೇ ಇಲ್ಲವೊ? ೧೯೮೫-೧೯೮೬ರಲ್ಲಿ ಎಷ್ಟು ಜನ ವಿದ್ಯಾರ್ಥಿಗಳು ಹೊಸದಾಗಿ ಸೇರಿದ್ದಾರೆ? ಹೊಸದಾಗಿ ಸೇರಿದವರಿಗೆ ಹಾಸಿಗೆ ಹೊದಿಕೆಗಳನ್ನು ಕೊಡಲಾಗಿದೆಯೆ?

ಶ್ರೀ ಜಿ. ಬಸವಣ್ಣೆಪ್ಪ.--ಮಾನ್ಯಸದಸ್ಯರ ಪ್ರಶ್ನೆ ಅರ್ಥಪೂರ್ಣವಾಗಿದೆ. ಹೊಸದಾಗಿ ಸೇರಿದವರಿಗೆಲ್ಲ ಹಾಸಿಗೆ ಹೊದಿಕೆಗಳನ್ನು ಕೊಡಲಾಗಿದೆ.

ಶ್ರೀ ಜಿ. ರಾಜುಗೌಡ.--ಪರಿಶಿಷ್ಟ ಜಾತಿ ಮತ್ತು ವರ್ಗಗಳವರಿಗೆ ಕುರಿ, ಕೋಳಿ, ಎತ್ತು, ಎಮ್ಮೆ ಕೊಡುವುದಕ್ಕಿಂತ ಅವರ ಮಕ್ಕಳ ವಿದ್ಯಾಭ್ಯಾಸದ ಕಡೆಗೆ ಹೆಚ್ಚಿನ ಗಮನ ಕೊಟ್ಟಲ್ಲ ಎನ್ನುವುದು ನಿಜವಲ್ಲವೆ ?

ಶ್ರೀ ಜಿ. ಬಸವಣ್ಣೆಪ್ಪ.--ವಿದ್ಯಾರ್ಥಿನಿಲಯಗಳಲ್ಲಿರತಕ್ಕ ಪರಿಶಿಷ್ಟ ಜಾತಿ ಮತ್ತು ವರ್ಗಗಳವರ ಮಕ್ಕಳ ವಿದ್ಯಾಭ್ಯಾಸದ ಕಡೆಗೆ ಸರ್ಕಾರ ಹೆಚ್ಚಿನ ಆಸಕ್ತಿ ವಹಿಸಿ ಒಳ್ಳೆಯ ಕಾರ್ಯಕ್ರಮವನ್ನು ರೂಪಿಸಿದ್ದೇವೆ.

ರಾಜ್ಯದಲ್ಲಿರುವ ಗ್ರಾಮ ಲೆಕ್ಕಿಗರ ಖಾಲಿ ಹುದ್ದೆಗಳು

೧೩೮. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).--ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಜಿಲ್ಲಾವಾರು ಖಾಲಿ ಇರುವ ಗ್ರಾಮ ಲೆಕ್ಕಿಗರ ಸಂಖ್ಯೆ ಎಷ್ಟು ?

ಆ) ಕೆಲವು ಜಿಲ್ಲೆಗಳಲ್ಲಿ ೧೯೮೫ನೇ ಸಾಲಿನಿಂದ ಇಲ್ಲಿಯವರೆಗೆ ಯಾವುದೇ ಗ್ರಾಮ ಲೆಕ್ಕಿಗರ ಖಾಲಿ ಜಾಗಗಳನ್ನು ಭರ್ತಿ ಮಾಡದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?